# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 748 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 26-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ (5ವಿತರಣಾ ಕೇಂದ್ರ) ನಿವೃತ್ತಿ ಹೊಂದಿರುವ ನೌಕರರ ಸಂಖ್ಯೆ ಎಷ್ಟು; | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನವೆಂಬರ್-2022ರ ಅಂತ್ಯಕ್ಕೆ, 19,973 ಪಿಂಚಣಿದಾರರು (ನಿವೃತ್ತಿಹೊಂದಿರುವ) ಹಾಗೂ 19,222 ಕುಟುಂಬ ಪಿಂಚಣಿದಾರರು ಸೇರಿದಂತೆ ಒಟ್ಟು- 39,195 ಪಿಂಚಣಿದಾರರು ಇರುತ್ತಾರೆ. |
| ಆ) | ನಿವೃತ್ತಿ ಹೊಂದಿರುವ ನೌಕರರಿಗೆ ಪ್ರತಿ ವರ್ಷ ಪಿಂಚಣಿ ರೂಪದಲ್ಲಿ ಎಷ್ಟು ಹಣವನ್ನು ಪಾವತಿ ಮಾಡಲಾಗುತ್ತಿದೆ; | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನಿಂದ ಕಳೆದ 3 ವರ್ಷಗಳಲ್ಲಿ ಪಾವತಿ ಮಾಡಿರುವ ಪಿಂಚಣಿ ಸೌಲಭ್ಯಗಳ ವಿವರ ಈ ಕೆಳಗಿನಂತಿದೆ. (ರೂ.ಕೋಟಿಗಳಲ್ಲಿ) |

| ಆರ್ಥಿಕ ವರ್ಷ | ಪಾವತಿ ಮಾಡಿದ ಪಿಂಚಣಿ ಸೌಲಭ್ಯಗಳ ಮೊತ್ತ | | | |
|---|---|---|---|---|
| | ಪಿಂಚಣಿ/ ಕುಟುಂಬ ಪಿಂಚಣಿ | ಪರಿವರ್ತಿತ ಪಿಂಚಣಿ | ಉಪದಾನ | ಒಟ್ಟು |
| 2019-20 | 1480.11 | 211.86 | 193.70 | 1885.67 |
| 2020-21 | 1497.42 | 186.18 | 166.07 | 1849.67 |
| 2021-22 | 1640.95 | 171.07 | 166.20 | 1978.22 |

| | ಪ್ರಶ್ನೆ | ಉತ್ತರ |
|---|---|---|
| ಇ) | ನಿವೃತ್ತಿ ನೌಕರರ ಪಿಂಚಣಿಯ ಹಣವನ್ನು ಸರಿದೂಗಿಸಲು ಗ್ರಾಹಕರ ಮೇಲೆ ವಿದ್ಯುತ್ ಬಿಲ್ಲಿನ ಜೊತೆಯಲ್ಲಿ ಸೇರಿಸಲು ಸರ್ಕಾರ ಚಿಂತನೆ ನಡೆಸಿದೆಯೇ; ಹಾಗೂ ಯಾವುದಾದರೂ ಹೊಸ ಆದೇಶವನ್ನು ಹೊರಡಿಸಲು ಸರ್ಕಾರ ಸಿದ್ಧತೆ ಮಾಡಿಕೊಳ್ಳಲಾಗಿದೆಯೇ; | ರಾಜ್ಯದ ಆಯವ್ಯಯದ ಮಿತಿಯಲ್ಲಿಯೇ ಸರ್ಕಾರದ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುದಾನ ಒದಗಿಸಬೇಕಾಗಿರುವುದರಿಂದ, ಟ್ರಸ್ಟ್‌ಗೆ ಪ್ರತಿ ಆರ್ಥಿಕ ವರ್ಷ ಪಾವತಿಸಬೇಕಿರುವ ಪಿಂಚಣಿ ವಂತಿಗೆ ಹಾಗೂ ಹಿಂದಿನ ವರ್ಷಗಳ ವಂತಿಗೆ ಬಾಕಿಯನ್ನು ಬಿಡುಗಡೆಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ ಕವಿ ಮಂಡಳಿ/ ಕವಿಪ್ರನಿನಿ/ ವಿಸ ಕಂಪನಿಗಳಲ್ಲಿ ಸಲ್ಲಿಸಿದ ಸೇವೆಗಾಗಿ ಪಿಂಚಣಿದಾರರ ಪಿಂಚಣಿ ವೆಚ್ಚವನ್ನು ಸರ್ಕಾರ ಭರಿಸುವ ಬದಲು ಪ್ರಧಾನ ಉದ್ಯೋಗದಾತರಾದ ಕವಿಪ್ರನಿನಿಯಮಿತವು ಜಕಾತಿಯಲ್ಲಿ ಬೇಡಿಕೆ ಮಾಡುವುದು ಸೂಕ್ತವಾಗಿರುವುದರಿಂದ, ಸರ್ಕಾರ ಆದೇಶ ಸಂಖ್ಯೆ. ಎನರ್ಜಿ/168/ಪಿಎಸ್‌ಆರ್/2022 ದಿನಾಂಕ 15.11.2022 ಮತ್ತು ಸದರಿ ಆದೇಶದ ತಿದ್ದುಪಡಿ ದಿನಾಂಕ 24.11.2022ರಲ್ಲಿ ಈ ಕೆಳಗಿನಂತೆ ಆದೇಶಿಸಿದೆ.<br>1. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ) ಉದ್ಯಮಗಳು ಮತ್ತು ಅದರ ಸಿಬ್ಬಂದಿ ಮತ್ತು ವಿದ್ಯುಚ್ಛಕ್ತಿ ವಿತರಣ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವರ್ಗಾವಣೆ) ನಿಯಮಗಳು 2002ರ ನಿಯಮ 4(13)(1)ಕ್ಕೆ ತಿದ್ದುಪಡಿ ಆದೇಶ ಹೊರಡಿಸುವುದು.<br>2. ಸರ್ಕಾರದಿಂದ ಕವಿಪ್ರನಿನಿಯಮಿತ ಮತ್ತು ವಿಸಕಂಪನಿಗಳ ಪಿ&ಜಿ ಟ್ರಸ್ಟ್‌ಗೆ ಭರಿಸಬೇಕಾಗಿರುವ ಪಿಂಚಣಿ ವಂತಿಗೆ ಬಾಬ್ತನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಆರ್ಥಿಕ ವರ್ಷ 2023-24ನೇ ಸಾಲಿನಿಂದ ಮುಂದಿನ ಆದೇಶದವರೆಗೆ ಜಕಾತಿಯ ದರದಲ್ಲಿ ಕ್ಲೈಮ್ ಮಾಡುವುದು/ ವರ್ಗಾಯಿಸುವುದು. |

.....2

| | | |
|---|---|---|
| | | 3. ಸರ್ಕಾರದಿಂದ ಪಾವತಿಸಬೇಕಾಗಿರುವ 2021-22 ರಿಂದ 2022-23ರವರೆಗಿನ ಬಾಕಿ ಪಿಂಚಣಿ ವಂತಿಗೆ ಮೊತ್ತ ರೂ. 3,353.27 ಕೋಟಿಗಳನ್ನು 2023-24ನೇ ಸಾಲಿನಿಂದ ಮುಂದಿನ ಮೂರು ಸಮಾನ ಕಂತುಗಳಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಜಕಾತಿಯ ದರದಲ್ಲಿ ಕ್ಲೈಮ್ ಮಾಡುವುದು /ವರ್ಗಾಯಿಸುವುದು. |
| ಈ) | ಹಾಗಿದ್ದಲ್ಲಿ, ಗ್ರಾಹಕರು ಯಾವ ಆಧಾರದ ಮೇಲೆ ಹೆಚ್ಚುವರಿಯಾಗಿ ಹಣವನ್ನು ಪಾವತಿ ಮಾಡಬೇಕಾಗುತ್ತಿದೆ; ಇದರ ಹೊರೆಯನ್ನು ಯಾವ ಕಾರಣಕ್ಕಾಗಿ ಗ್ರಾಹಕರ ಮೇಲೆ ಹೊರೆ ಹಾಕಲಾಗುತ್ತಿದೆ; | • ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ (ವರ್ಗಾವಣೆ ನಿಯಮಗಳು) ನಿಯಮಗಳು 1999ರಡಿ ಕವಿಮಂಡಳಿಯನ್ನು ನಿಗಮೀಕರಣ ಮಾಡಿ ಕವಿಪ್ರನಿ ನಿಯಮಿತವನ್ನು ರಚಿಸಲಾಗಿರುತ್ತದೆ. ಕವಿಪ್ರನಿ ನಿಯಮಿತವನ್ನು ರಚಿಸುವ ಪೂರ್ವದಲ್ಲಿ ಅಂದರೆ ಕವಿಮಂಡಳಿಯಲ್ಲಿ ಪಿಂಚಣಿ ಸವಲತ್ತುಗಳನ್ನು ಸಿಬ್ಬಂದಿ ವೆಚ್ಚದಲ್ಲಿ ಸೇರಿಸಿ, ಜಕಾತಿಯಿಂದಲೇ ವಸೂಲಾತಿ ಮಾಡುವ ಕ್ರಮವನ್ನು ಅನುಕರಿಸಲಾಗುತ್ತಿತ್ತು. ಪಿಂಚಣಿ ವೆಚ್ಚಕ್ಕೆ ಸಂಬಂಧಿಸಿದಂತೆ, ಸರ್ಕಾರದಿಂದ ಯಾವುದೇ ಅನುದಾನ/ ಸಹಾಯಧನವನ್ನು ಒದಗಿಸಲಾಗುತ್ತಿರಲಿಲ್ಲ. ಕವಿಪ್ರನಿ ನಿಯಮಿತವನ್ನು ಪುನರ್ ರಚಿಸಿ ವಿಸಕಂಪನಿಗಳು ರಚನೆಯಾಗುವ ಮಧ್ಯಂತರ ಅವಧಿಯಲ್ಲಿ (1999 ರಿಂದ 2002) ಪಿಂಚಣಿ ಪಾವತಿಗಾಗಿ ಸರ್ಕಾರವು ಅನುದಾನವನ್ನು ಒದಗಿಸಿರುತ್ತದೆ.<br><br>• ತ್ರಿಪಕ್ಷೀಯ ಒಪ್ಪಂದದ ಕಂಡಿಕೆ (d) ಅನ್ವಯ ಸರ್ಕಾರವು ಪಿಂಚಣಿ ಪಾವತಿಯನ್ನು ಖಾತ್ರಿ ಪಡಿಸಿದ್ದು ಹಾಗೂ ಎರಡನೇ ವರ್ಗಾವಣೆ ಯೋಜನೆ ನಿಯಮ 2002ರ ನಿಯಮ (4) ಉಪನಿಯಮ 13(1)ರಲ್ಲಿ ಪಿಂಚಣಿ ಪಾವತಿಗೆ ಸೂಕ್ತ ವ್ಯವಸ್ಥೆ(Appropriate arrangements) ಮಾಡಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕನುಸಾರ, ಕವಿಪ್ರನಿನಿ / ವಿಸಕಂಗಳ ಸಿಬ್ಬಂದಿಗಳ ಪಿಂಚಣಿ ಮೊತ್ತವನ್ನು (ಸರ್ಕಾರದ ಭಾಗದ ಮೊತ್ತ) ಜಕಾತಿಯಲ್ಲಿ ಸೇರಿಸಿ ಕ್ಲೇಮು ಮಾಡುವಂತೆ ಸೂಚಿಸಲು, ಸರ್ಕಾರವು ಅಧಿಕಾರ ಹೊಂದಿರುತ್ತದೆ.<br><br>• ರಾಜ್ಯ ಸರ್ಕಾರವು ರಾಜ್ಯದ ಆಯವ್ಯಯದ ಮಿತಿಯಲ್ಲಿಯೇ ಸರ್ಕಾರದ ಎಲ್ಲ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಆಯವ್ಯಯದಲ್ಲಿ ಅನುದಾನ ಒದಗಿಸಬೇಕಾಗಿರುವುದರಿಂದ, ಪಿ & ಜಿ ಟ್ರಸ್ಟ್‌ಗೆ ಪ್ರತಿ ಆರ್ಥಿಕ ವರ್ಷದಲ್ಲಿ ಪಾವತಿಸಬೇಕಿರುವ ಪಿಂಚಣಿ ವಂತಿಕೆಯನ್ನು (ಸರ್ಕಾರದ ಭಾಗದ ಮೊತ್ತ) ಸಂಪೂರ್ಣವಾಗಿ ಪಾವತಿಸಲಾಗಿರುವುದಿಲ್ಲ. ಆದ್ದರಿಂದ, ಸರ್ಕಾರದಿಂದ ಪಾವತಿಸಬೇಕಾಗಿದ್ದ ಪಿಂಚಣಿ ವಂತಿಕೆ ಬಾಕಿ ಮೊತ್ತವು ಹೆಚ್ಚಳಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಪಾವತಿಸಬೇಕಾಗಿರುವ ಪಿಂಚಣಿ ವಂತಿಕೆಯ ಬಾಕಿ ಮೊತ್ತವನ್ನು (ಹಿಂದಿನ ವರ್ಷಗಳ) ಹಾಗೂ ಪ್ರಸ್ತುತ ಸಾಲಿನ ಪಿಂಚಣಿ ವಂತಿಕೆ ಮೊತ್ತವನ್ನು ((ಸರ್ಕಾರದ ಭಾಗದ ಮೊತ್ತ) ಬಿಡುಗಡೆಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ. |

....3

<table>
<tr>
<td></td>
<td></td>
<td>
<ul>
<li>ಪಿ & ಜಿ ಟ್ರಸ್ಟ್‌ಗೆ ಕವಿಪ್ರನಿನಿಯಮಿತ / ವಿಸಕಂಪನಿಗಳಿಂದ ಮತ್ತು ಸರ್ಕಾರದಿಂದ ಪಾವತಿಯಾಗುವ ಪಿಂಚಣಿ ವಂತಿಕೆಯ ಹೂಡಿಕೆ ಮೇಲಿನ ಬಡ್ಡಿ ಗಳಿಕೆಯನ್ನು ಹೊರತುಪಡಿಸಿ, ಇತರ ಯಾವುದೇ ಆರ್ಥಿಕ ಮೂಲಗಳಿಲ್ಲದಿರುವುದರಿಂದ, ನಿವೃತ್ತಿ ಸೌಲಭ್ಯಗಳ ಪಾವತಿಗಾಗಿ ಸರ್ಕಾರ / ಕಂಪನಿಗಳ ವಂತಿಕೆಯನ್ನೇ ಅವಲಂಬಿಸಬೇಕಿರುತ್ತದೆ.</li>
<li>ಸರ್ಕಾರವು ತನ್ನ ಭಾಗದ ಪಿಂಚಣಿ ವೆಚ್ಚವನ್ನು ಕವಿಪ್ರನಿನಿ ಹಾಗೂ ವಿಸಕಂಗಳು ಪ್ರಸರಣ ವೆಚ್ಚ / ವಿದ್ಯುತ್ ಸರಬರಾಜಿನ ವೆಚ್ಚ ಜಕಾತಿ ಮೂಲಕ ವಸೂಲಾತಿ ಮಾಡಲು ನಿರ್ಧರಿಸಿದರೆ, ಈ ಮೊತ್ತವನ್ನು ಜಕಾತಿಯಲ್ಲಿ ಕ್ಲೇಮು ಮಾಡಲು ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಅರ್ಜಿಯನ್ನು ಸಲ್ಲಿಸಬೇಕಿರುತ್ತದೆ.</li>
<li>ವಿದ್ಯುತ್ ಕಾಯಿದೆ-2003 ರಲ್ಲಿ ವಿದ್ಯುತ್ ಸರಬರಾಜು ವೆಚ್ಚವನ್ನು ಜಕಾತಿಯಲ್ಲಿ ಪ್ರತಿಬಿಂಬಿಸಲು ಅವಕಾಶ ಕಲ್ಪಿಸಿದ್ದು, ಈ ವೆಚ್ಚವು ಬಂಡವಾಳ ವೆಚ್ಚ (CapEx) ಹಾಗೂ ನಿರ್ವಹಣಾ ವೆಚ್ಚಗಳನ್ನು (OpEx) ಒಳಗೊಂಡಿರುತ್ತದೆ ಹಾಗೂ ಪಿಂಚಣಿ ವೆಚ್ಚವು ಸಿಬ್ಬಂದಿ ವೆಚ್ಚದ ಒಂದು ಭಾಗವಾಗಿದ್ದು, ನಿರ್ವಹಣಾ ವೆಚ್ಚದಲ್ಲಿ ಅಡಕವಾಗಿರುತ್ತದೆ. ಪಿಂಚಣಿ ವೆಚ್ಚವನ್ನು ಜಕಾತಿಯಲ್ಲಿ ಸೇರ್ಪಡೆ ಮಾಡಲು ಯಾವುದೇ ಪ್ರತಿಬಂಧವನ್ನು ವಿಧಿಸಿರುವುದಿಲ್ಲವಾದ್ದರಿಂದ, ಕವಿಮಂಡಳಿ / ಕವಿಪ್ರನಿನಿ / ವಿಸಕಂಪನಿಗಳಲ್ಲಿ ಸಲ್ಲಿಸಿದ ಸೇವೆಗಾಗಿ ಪಿಂಚಣಿದಾರರ ಪಿಂಚಣಿ ವೆಚ್ಚವನ್ನು ಸರ್ಕಾರ ಭರಿಸುವ ಬದಲು ಪ್ರಧಾನ ಉದ್ಯೋಗದಾತರಾದ ಕವಿಪ್ರನಿನಿ / ವಿಸಕಂಪನಿಗಳು ಜಕಾತಿಯಲ್ಲಿ ಬೇಡಿಕೆ ಮಾಡುವುದು ಸೂಕ್ತವಾಗಿರುತ್ತದೆ.</li>
</ul>
</td>
</tr>
<tr>
<td>ಉ)</td>
<td>ಕೆಪಿಟಿಸಿಎಲ್ ಸಂಸ್ಥೆಗೆ ಪ್ರತಿ ವರ್ಷ ಎಷ್ಟು ಹಣ ಗ್ರಾಹಕರಿಂದ ಸಂದಾಯವಾಗುತ್ತಿದೆ; ಸಂಬಳ ಮತ್ತು ಪಿಂಚಣಿಗೆ ಎಷ್ಟು ಹಣವನ್ನು ನೀಡಲಾಗುತ್ತಿದೆ; ಸರ್ಕಾರದಿಂದ ಪ್ರತಿ ವರ್ಷ ಸಂಸ್ಥೆಗೆ ನೀಡಲಾಗುತ್ತಿರುವ ಅನುದಾನವೆಷ್ಟು?</td>
<td>
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಒಂದು ಪ್ರಸರಣ ಸಂಸ್ಥೆಯಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಪ್ರಸರಣ ಬೇಡಿಕೆ ಶುಲ್ಕವು ಈ ಕೆಳಕಂಡಂತಿದೆ:
(ರೂ.ಕೋಟಿಗಳಲ್ಲಿ)
<table>
<tr><th>ಆರ್ಥಿಕ ವರ್ಷ</th><th>ಪ್ರಸರಣ ಬೇಡಿಕೆ ಶುಲ್ಕ</th></tr>
<tr><td>2021-22</td><td>4106.98</td></tr>
<tr><td>2020-21</td><td>3900.13</td></tr>
<tr><td>2019-20</td><td>3571.74</td></tr>
</table>
ಮೇಲಿನ ಪ್ರಸರಣ ಬೇಡಿಕೆ ಶುಲ್ಕವು ವಿದ್ಯುತ್ ಸರಬರಾಜು ಕಂಪನಿಗಳ ಜಕಾತಿಯಲ್ಲಿ ಸೇರಿದ್ದು, ಗ್ರಾಹಕರಿಗೆ ಕವಿಪ್ರನಿನಿಯಿಂದ ನೇರವಾಗಿ ಯಾವುದೇ ಹೊರೆ ಆಗಿರುವುದಿಲ್ಲ.
</td>
</tr>
</table>

...4

ಕ.ವಿ.ಪ್ರ.ನಿ.ನಿಯಮಿತದಿಂದ ನೌಕರರಿಗೆ ಈ ಕೆಳಗಿನಂತೆ ಸಂಬಳವನ್ನು ಪಾವತಿಸಲಾಗಿರುತ್ತದೆ (ವಿದ್ಯುತ್ ಸರಬರಾಜು ಕಂಪನಿಗಳನ್ನು ಹೊರತುಪಡಿಸಿ)

(ರೂ.ಕೋಟಿಗಳಲ್ಲಿ)

| ಆರ್ಥಿಕ ವರ್ಷ | ಸಂಬಳ |
|---|---|
| 2021-22 | 882.76 |
| 2020-21 | 827.82 |
| 2019-20 | 893.75 |

ಕ.ವಿ.ಪ್ರ.ನಿ.ನಿಯಮಿತವು ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಪಿಂಚಣಿಗೆ ಸಂಬಂಧಿಸಿದ ಮೊತ್ತವನ್ನು ಪಾವತಿಸಿರುವ ವಿವರಗಳು ಕೆಳಕಂಡಂತಿವೆ:

(ರೂ.ಕೋಟಿಗಳಲ್ಲಿ)

| ಆರ್ಥಿಕ ವರ್ಷ | ಪಿಂಚಣಿ |
|---|---|
| 2021-22 | 206.56 |
| 2020-21 | 154.25 |
| 2019-20 | 276.44 |

ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನಿಂದ ಕಳೆದ 3 ವರ್ಷಗಳಲ್ಲಿ ಪಾವತಿ ಮಾಡಿರುವ ಮತ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.

(ರೂ. ಕೋಟಿಗಳಲ್ಲಿ)

| ಆರ್ಥಿಕ ವರ್ಷ | ಪಾವತಿ ಮಾಡಿದ ಪಿಂಚಣಿ ಸೌಲಭ್ಯಗಳ ಮೊತ್ತ | ಪಿಂಚಣಿ ಪಾವತಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ |
|---|---|---|
| 2019-20 | 1885.67 | 1000.00 |
| 2020-21 | 1849.67 | 3000.00 (1000+2000 (ಹಿಂದಿನ ಬಾಕಿ)) |
| 2021-22 | 1978.22 | 500.00 |
| 2022-23 (ನವಂಬರ್-22 ರವರೆಗೆ) | 1384.48 | ಯಾವುದೇ ಮೊತ್ತವನ್ನು ಬಿಡುಗಡೆ ಮಾಡಿರುವುದಿಲ್ಲ |

ಈ ಪಿಂಚಣಿ ಸೌಲಭ್ಯವು ಪಿಂಚಣಿ/ ಕುಟುಂಬ ಪಿಂಚಣಿ, ಪರಿವರ್ತಿತ ಪಿಂಚಣಿ ಮತ್ತು ಉಪದಾನಗಳನ್ನು ಒಳಗೊಂಡಿರುತ್ತದೆ.

ಸಂಖ್ಯೆ: ಎನರ್ಜಿ 277 ಇಬಿಎಸ್ 2022

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು